<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆಃ 106/2021</u>

ಪಿ.ಡಬ್ಲುಃ 9 ಸಿಡಬ್ಲುಃ 15

| | | |
|---|---|---|
| ಸಾಕ್ಷಿಯ ಹೆಸರು | : | ತುಕಾರಾಮ್ |
| ತಂದೆಯಹೆಸರು | : | ಪೊಂಪಾಪತಿ |
| ವಯಸ್ಸು | : | 28 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಮೋಕಾ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 19-07-2024

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಆರೋಪಿ 1 ಮತ್ತು 2 ರವರನ್ನು ನಾನು 3 ವರ್ಷದ ಹಿಂದೆ ನೋಡಿದ್ದೆ. ಆರೋಪಿ 1 ಮತ್ತು 2 ರವರು ನನ್ನನ್ನು ಮತ್ತು ಪೊಲೀಸರನ್ನು ಮೋಕಾ ಕಾಲುವೆಯ ಹತ್ತಿರ ಕರೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ಚಾಸಾ-14 ರವರು ಸಹ ಹಾಜರಿದ್ದನು. 1 ನೇ ಆರೋಪಿಯು ತನ್ನ ಮೊಬೈಲ್ ಅಲ್ಲಿ ಬಿದ್ದಿದೆ ಎಂದು ಹೇಳಿ ತೋರಿಸಿದ. ಅಲ್ಲಿ ಮೊಬೈಲ್ ಇತ್ತು . ಪೊಲಿಸೀರು ಸದರಿ ಮೊಬೈಲ್ ನ್ನು ತೆಗೆದುಕೊಂಡರು. ಅಲ್ಲಿ ನನ್ನ ಸಹಿ ತೆಗೆದುಕೊಂಡರು. ನಂತರ ನಮ್ಮನ್ನು ತಾಳೂರು ರಸ್ತೆಗೆ ಕರೆದುಕೊಂಡು ಬಂದರು. 1 ನೇ ಆರೋಪಿಯ ಮನೆಗೆ ಕರೆದುಕೊಂಡು ಬಂದರು. ಮನೆಯಲ್ಲಿ 1 ನೇ ಆರೋಪಿಯು ಮಂಚದ ಕೆಳಗೆ ಇದ್ದ ಮು.ಮಾ-6 ರಿಂದ 8 ನ್ನು ತೆಗೆದು ಹಾಜರುಪಡಿಸಿದ್ದನು. ಪೊಲೀಸರು ಸ್ಥಳದಲ್ಲಿ ಏನನ್ನು ಬರೆದುಕೊಂಡು ಅದರಲ್ಲಿ ನನ್ನ ಸಹಿ ಪಡೆದುಕೊಂಡರು. ಮು.ಮಾ-6 ರಿಂದ 8 ನ್ನು ಪೊಲೀಸರು ತೆಗೆದುಕೊಂಡರು. ನಾನು ಈಗ ನೋಡುತ್ತಿರುವ ನಿಪಿ-16 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಕೊನೆಯ ಪುಟದಲ್ಲಿ ಗುರುತಿಸಲಾಯಿತು. ನಿಪಿ-15 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-15(ಬಿ)

ಎಂದು ಗುರುತಿಸಲಾಯಿತು. ಆ ದಿವಸ ಪೊಲೀಸರು ತೆಗೆದುಕೊಂಡು ವಸ್ತುಗಳು ನ್ಯಾಯಾಲಯದ ಮುಂದೆ ಇರುವ ಮು.ಮಾ-6 ರಿಂದ 8 ಆಗಿವೆ. ಅವುಗಳ ಮೇಲಿನ ಸಾಕ್ಷಿಯ ಸಹಿಗಳನ್ನು ಮು.ಮಾ-6(ಎ) ರಿಂದ 8(ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಪೊಲೀಸರು ನಿಪಿ-17 ರಿಂದ 22 ರಂತೆ ಫೋಟೋಗಳನ್ನು ತೆಗೆಸಿದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

ಆರೋಪಿಯು ಮು.ಮಾ-8 ಶರ್ಟ್ ನ್ನು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದೆ ಎಂದು ಹೇಳಿದ್ದ ಎಂದರೆ ಸರಿಯಲ್ಲ. ಮು-ಮಾ-6 ಮತ್ತು 7 ರಿಂದ ಮೃತ ಮಲ್ಲಿಕಾರ್ಜುನ ಈತನಿಗೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರು ಕಾಲುವೆಯಲ್ಲಿ ಮೃತನ ಮೊಬೈಲ್ ನ್ನು ಕೊಲೆ ಮಾಡಿದ ನಂತರ ಬಿಸಾಡಿದ್ದೆವು ಎಂದು ಹೇಳಿದ್ದರು ಎಂದರೆ ಸರಿಯಲ್ಲ.

<u>ಪಾಟೀಸವಾಲು 1 ರಿಂದ 3 ನೇ ಆರೋಪಿತರ ಪರವಾಗಿ ಶ್ರೀ ವೈ.ಕೆ ಮತ್ತು ಜಬಿಆ ರ್ ಮತ್ತು ಎಸ್ ಆರ್ ಎಸ್ ವಕೀಲರಿಂದಃ</u>

ಆ ದಿವಸ ನಾನು ಮೋಕಾ ಗ್ರಾಮದಲ್ಲಿ ಇದ್ದೆ. ಮುಂಜಾನೆ 6-00 ಗಂಟೆ ಸಮಯಲ್ಲಿ ನನ್ನನ್ನು ಪೊಲೀಸರು ಹೊಲದಲ್ಲಿ ಕರೆದರು. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತು ಗಳನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ತಾಳೂರು ರಸ್ತೆಯಲ್ಲಿ ಮು.ಮಾ-6 ರಿಂದ 8 ನ್ನು ಮತ್ತು ಕಾಲುವೆಯ ಬಳಿ ಮೊಬೈಲ್ ನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ನಾನು ಪೊಲೀಸರ ಒತ್ತಾಯದ ಮೇರೆಗೆ

ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದು ಮತ್ತು ನನ್ನ ಸಮಕ್ಷಮ ಮಹಜರ್ ಮಾಡಿದ್ದರು ಎಂದು ಮತ್ತು ಆರೋಪಿ **1** ಮತ್ತು **2** ರವರು ಸ್ಥಳವನ್ನು ತೋರಿಸಿ ಮು.ಮ-**6** ರಿಂದ **8** ನ್ನು ಹಾಜರುಪಡಿಸಿದ್ದರು ಎಂದು ಮತ್ತು ಪೊಲೀಸರು ಮಹಜರ ಮಾಡಿ ಅದನ್ನು ಜಪ್ತು ಮಾಡಿಕೊಂಡಿದ್ದರು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಮು.ಮಾ-**6** ರಿಂದ **8** ತರಹದ ವಸ್ತುಗಳು ಎಲ್ಲಾ ಕಡೆ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ಪೊಲೀಸರು ಮು.ಮಾ-**6** ರಿಂದ **8** ನ್ನು ಕೇಸಿಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ನಾನು ಪೊಲೀಸರ ಜೊತೆ ಪಂಚನಾಮೆಗೆ ಕಾಲುವೆ ಬಳಿ ಮತ್ತು **1** ನೇ ಆರೋಪಿಯ ಮನೆಯ ಬಳಿ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಎಲಾಲ ದಾಖಲಾತಿಗಳಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ಪೊಲೀಸ್ ಠಾಣೆಯಲ್ಲಿ ಎಲ್ಲಾ ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯಲ್ಲಿ ಮತ್ತು ಸ್ಥಳಗಳಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತನ್ನು ಕೇಳಿಕೊಂಡು ಅವರ ಹೇಳಿಕೊಟ್ಟಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.